(ಊ) ಈ ಪ್ರಶ್ನೆಯನ್ನು ಕಾಫಿ ಒತ್ತುವರಿ ಬಗ್ಗೆ ನೇಮಕವಾದ ಸಮಿತಿಯು ವರದಿ ಬಂದ ನಂತರ ಪರಿಶೀಲಿಸಲಾಗುತ್ತದೆ.

(ಋ) 'ಊ' ದ ಉತ್ತರವೇ ಇದಕ್ಕೂ ಅನ್ವಯಿಸುತ್ತದೆ.

(ಋ) ಪ್ರಾದೇ. ೧೯-೯-೧೯೭೭ರ ಸರ್ಕಾರದ ಆಜ್ಞೆ ಹಾಗೂ ಅದರ ಅಂಗವಾಗಿ ಹೊರಡಿಸಿರುವ ಕೆಲವು ಸುತ್ತೋಲೆಗಳ ಪ್ರಕಾರ ಭೂರಹಿತ ಜನರು ಹಾಗೂ ಸಣ್ಣ ಹಿಡುವಳಿದಾರರು ಸರ್ಕಾರದ ಜಮೀನನ್ನು ೧೯-೯-೭೭ ರ ಹಿಂದಿನಿಂದ ಕನಿಷ್ಠ ಹತ್ತು ವರ್ಷಗಳ ಕಾಲ ಹಿಂದಕ್ಕೆ ಅನಧಿಕೃತವಾಗಿ ಕೃಷಿ ಉದ್ದೇಶಕ್ಕೆ ಸಾಗು ಮಾಡಿದ್ದರೆ ಅಂತಹವರಿಗೆ ಎರಡು ಹೆಕ್ಟರು ಮಿಷ್ಕಿ ಅಥವಾ ಅದಕ್ಕೆ ಸಮಾನವಾದ ತರಿ ಅಥವಾ ಭಾಗಾಯತು ಸಾಗುವಳಿಗೆ ಸಮಂಜಸವಾದ ಒತ್ತುವರಿ ಜಮೀನನ್ನು ಸಕ್ರಿಯಗೊಳಿಸಲು ಅವಕಾಶ ವಿರುತ್ತದೆ.

(ಖಂ) ಕಾಫಿ ಒತ್ತುವರಿ ಸಮಿತಿಯು ವರದಿ ಸಲ್ಲಿಸುವವರೆಗೆ ಇದರ ಬಗ್ಗೆ ಖಚಿತವಾದ ಅಂಕಿ ಅಂಶಗಳನ್ನು ಕೊಡಲು ಬರುವುದಿಲ್ಲ.

ಬರಗಾಲದ ನಿವಾರಣೆಗಾಗಿ ನೇಮಿಸಿದ ಸಮಿತಿಗಳ ಬಗ್ಗೆ.

೧೫೫. ಶ್ರೀ ಬಿ. ಬಿ. ಚಿಮ್ಮನಕಟ್ಟಿ (ಬಾದಾಮಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಕಂದಾಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಬರಗಾಲಕ್ಕೆ ತುತ್ತಾದ ಜಿಲ್ಲೆಗಳಿಗೆ ಪರಿಹಾರ ಕಂಡುಹಿಡಿಯಲು ಸರ್ಕಾರದವರು ರಚಿಸಿದ ವಿಭಾಗ ಮಟ್ಟದ ಸಮಿತಿಗಳ ಸಂಖ್ಯೆ ಎಷ್ಟು ?

ಆ) ಸದರಿ ಸಮಿತಿಯವರು ಎಷ್ಟು ಸಲ ಸಭೆ ಸೇರಿ ಯಾವ ಕ್ರಮಗಳನ್ನು ಕೈಗೊಂಡಿದ್ದಾರೆ ?

ಇ) ಅದರಿಂದ ಆದ ಪ್ರಯೋಜನವೇನು ?

ಶ್ರೀ ಪಿ. ಎಲ್. ಪಾಟೀಲ್ (ಕಂದಾಯ ಮಂತ್ರಿಗಳು).—

ಅ) ಈ ರೀತಿಯ ಯಾವ ವಿಭಾಗ ಮಟ್ಟದ ಸಮಿತಿಯನ್ನು ರಚಿಸಿಲ್ಲ.

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಬೆಂಗಳೂರು ನಗರದ ರೆವಿನ್ಯೂ ಪ್ರದೇಶದಲ್ಲಿರುವ ಸಾರ್ವಜನಿಕರಿಗೆ ಆಗುತ್ತಿರುವ ಅನಾನುಕೂಲತೆಗಳ ಬಗ್ಗೆ.

೧೬೧. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ನಗರದಲ್ಲಿ ನಗರ ಪಾಲಿಕೆಯ ಅಧಿಕಾರ ವ್ಯಾಪ್ತಿಗೆ ಬರುವ ರೆವಿನ್ಯೂ ಪ್ರದೇಶಗಳಾವುವು ಮತ್ತು ಬಿ.ಡಿ.ಎ. ವ್ಯಾಪ್ತಿಗೆ ಬರುವ ರೆವಿನ್ಯೂ ಪ್ರದೇಶಗಳಾವುವು ?

ಆ) ಈ ರೆವಿನ್ಯೂ ಪ್ರದೇಶಗಳಲ್ಲಿ ಸಾವಿರಾರು ಜನ ಮನೆ ಕಟ್ಟಿ ವಾಸವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಈ ಪ್ರದೇಶಗಳಲ್ಲಿ ನೀರು ಒಳಚರಂಡಿ ವ್ಯವಸ್ಥೆ ದೀಪ ಇವುಗಳು ಸಮರ್ಪಕವಾಗಿಲ್ಲದೆ ಜನತೆ ತೊಂದರೆಗೆ ಒಳಪಟ್ಟಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಈ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮಂತ್ರಿಗಳು).—

ಅ) ಸರ್ವೆ ಕೆಲಸ ನಡೆಯುತ್ತಿದೆ.